ಈ) ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿದ್ದು, ಹಣ ದುರುಪಯೋಗ ಸಾಬೀತಾದಲ್ಲಿ, ಸಿ.ಸಿ.ಎ. ನಿಯಮಾನುಸಾರ ತಪ್ಪಿತಸ್ಥರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

5789 (6416) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ ನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಯ ಯಾವ ಯಾವ ತರಗತಿಯ ಎಷ್ಟೆಷ್ಟು ಮಕ್ಕಳಿಗೆ ಬಿಸಿಯೂಟ ಒದಗಿಸಲಾಗುತ್ತಿದೆ;

ಆ) ಈ ಯೋಜನೆ ಜಾರಿ ಯಾವಾಗಿನಿಂದ ಈವರೆವಿಗೆ ದಾಖಲಾಗಿರುವ ದೂರುಗಳ ವಿವರಗಳೇನು, ಮಕ್ಕಳು ಅಸ್ವಸ್ಥರಾದರು ಎಂಬ ಪ್ರಕರಣಗಳು ಎಲ್ಲೆಲ್ಲಿ ಆಗಿವೆ;

ಇ) ಈ ರೀತಿಯಾಗಿ ಆಗದಂತೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ;

ಈ) ಈ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿಮಾಡಲು ಯಾವ ಕ್ರಮ ವಹಿಸಲಾಗುವುದು;

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)

ಅ) ರಾಜ್ಯದ ಎಲ್ಲಾ ಜಿಲ್ಲೆಯ ಸರ್ಕಾರಿ/ಅನುದಾನಿತ ಶಾಲೆಯ ತರಗತಿ 1 ರಿಂದ 7ನೇ ತರಗತಿಯ ಮಕ್ಕಳಿಗೆ ಬಿಸಿಊಟ ಒದಗಿಸಲಾಗುತ್ತಿದೆ.

- ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಈ ಯೋಜನೆಯನ್ನು 200203ನೇ ಸಾಲಿನಿಂದ ಈಶಾನ್ಯವಲಯದ ಶೈಕ್ಷಣಿಕವಾಗಿ ಹಿಂದುಳಿದ 7 ಜಿಲ್ಲೆಗಳಿಗೆ ಜಾರಿ ಮಾಡಲಾಯಿತು.

- 2003–04ನೇ ಸಾಲಿನಿಂದ ಉಳಿದ 20 ಜಿಲ್ಲೆಗಳಿಗೆ ವಿಸ್ತರಿಸಲಾಯಿತು.
- ಯೋಜನೆಯು ಜಾರಿಗೊಂಡನಂತರ ಈವರೆಗೂ ಕಂಡುಬಂದಂತಹ ಅಸ್ವಸ್ಥತೆ ಪ್ರಕರಣಗಳು ಈ ಕೆಳಗಿನಂತಿದೆ.
- ದಿನಾಂಕ : 3–7–2003ರಂದು ಸರ್ಕಾರಿ ಬಾಲಕಿಯರ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ನರಗುಂದ, ಇಲ್ಲಿ ಬಿಸಿಯೂಟ ಸೇವನೆಯಿಂದ 150 ಮಕ್ಕಳು ಅಸ್ವಸ್ಥಗೊಂಡಿರುತ್ತಾರೆ. ಪ್ರಥಮ ಚಿಕಿತ್ಸೆ ನೀಡಿದ ನಂತರ ಎಲ್ಲಾ ಮಕ್ಕಳು ಗುಣಮುಖರಾಗಿರುತ್ತಾರೆ.
- ದಿನಾಂಕ 3–7–2003ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಧಿಕುರುಬೆಟ್ಟ, ಗೋಕಾಕ್ ತಾಲ್ಲೂಕು, ಬೆಳಗಾಂ ಜಿಲ್ಲೆ ಇಲ್ಲಿ ಅರೆಬೆಂದ ಬಿಸಿಯೂಟ ಸೇವಿಸಿದ 92 ಮಕ್ಕಳು ಅಸ್ವಸ್ಥಗೊಂಡಿರುತ್ತಾರೆ. ಮಕ್ಕಳು ಹೊರರೋಗಿಗಳಾಗಿ ಚಿಕಿತ್ಸೆ ಕೊಡಿಸಲಾಗಿ ಎಲ್ಲರೂ ಗುಣಮುಖರಾಗಿರುತ್ತಾರೆ.
- ದಿನಾಂಕ 3–7–2003ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನವಲಗುಂದ, ಇಲ್ಲಿ ಬಿಸಿಯೂಟ ಸೇವಿಸಿದ 312 ಮಕ್ಕಳಲ್ಲಿ 36 ಮಕ್ಕಳು ಮಾತ್ರ ವಾಂತಿಯಿಂದ ಅಸ್ವಸ್ಥರಾಗಿರುತ್ತಾರೆ. ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಲಾಗಿ ಎಲ್ಲಾ ಮಕ್ಕಳು ಗುಣಮುಖರಾಗಿದ್ದಾರೆ.

- ದಿನಾಂಕ : 4-7-2003ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆನೆಗೊಂಡ ಹಾಗೂ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಭಾರತಿ ಕಾಲೋನಿ, ದಾವಣಗೆರೆ ನಗರ ಇಲ್ಲಿ ಬಿಸಿಊಟ ಸೇವಿಸಿದ 308 ಮಕ್ಕಳ ಪೈಕಿ 262 ಮಕ್ಕಳು ಅಸ್ವಸ್ಥಗೊಂಡಿರುತ್ತಾರೆ. ಸಕಾಲದಲ್ಲಿ ನೀಡಿದ ವೈದ್ಯರ ಚಿಕಿತ್ಸೆಯ ಫಲವಾಗಿ ಎಲ್ಲಾ ಮಕ್ಕಳು ಆರೋಗ್ಯವಾಗಿರುತ್ತಾರೆ.
- ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೂಗುರ್ತಿ, ಹೊಸನಗರ ತಾಲ್ಲೂಕು ಶಿವಮೊಗ್ಗ ಜಿಲ್ಲೆ ಇಲ್ಲಿ ಬಿಸಿಊಟ ಸೇವಿಸಿದ 40 ಮಕ್ಕಳಲ್ಲಿ 4 ಮಕ್ಕಳು ವಾಂತಿಯಿಂದ ಅಸ್ವಸ್ಥಗೊಂಡಿರುತ್ತಾರೆ. ನಂತರ ಮಕ್ಕಳಿಗೆ ಅಗತ್ಯ ಚಿಕಿತ್ಸೆ ಕೊಡಿಸಿದ ನಂತರ ಚೇತರಿಸಿಕೊಂಡಿರುತ್ತಾರೆ.
- ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುತ್ತಲು ಕಾಲೋನಿ, ಮಂಡ್ಯ ಜಿಲ್ಲೆ ಇಲ್ಲಿ ಒಟ್ಟು 567 ಮಕ್ಕಳು ಬಿಸಿಯೂಟ ಸೇವಿಸಿದ್ದು, 3 ಮಕ್ಕಳು ಅಸ್ವಸ್ಥಗೊಂಡಿರುತ್ತಾರೆ ಪ್ರಥಮ ಚಿಕಿತ್ಸೆ ನೀಡಿದ ಫಲವಾಗಿ ಈ ಮಕ್ಕಳು ಹುಣಮುಖರಾಗಿದ್ದು ಆರೋಗ್ಯವಾಗಿರುತ್ತಾರೆ. ಹಾಗೂದಿ:2205ರಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಾವರೆಕೆರೆ, ಮಂಡ್ಯ ಜಿಲ್ಲೆಯಲ್ಲಿ ಅರೆಬೆಂದ ಅನ್ನವನ್ನು ಸೇವಿಸಿದ ಪ್ರಯುಕ್ತ 113 ಮಕ್ಕಳು ಅಸ್ವಸ್ಥರಾಗಿರುತ್ತಾರೆ. ಚಿಕಿತ್ಸೆ ನೀಡಿದ ನಂತರ ಎಲ್ಲಾ ಮಕ್ಕಳು ಗುಣ ಮುಖರಾಗಿರುತ್ತಾರೆ.
- 23-06-2005 ಚಿತ್ರದುರ್ಗ ಜಿಲ್ಲೆ ವಡ್ಡರಸಿದ್ಧವ್ವನಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ 5 ಮಕ್ಕಳು ಅಸ್ವಸ್ಥರಾಗಿದ್ದರು.
- 23-6-2005, ಬೇಲಿಮಲ್ಲೂರು, ದಾವಣಗೆರೆ, ಹೊನ್ನಾಳಿ ತಾಲ್ಲೂಕಿನಲ್ಲಿ 20 ಮಕ್ಕಳು ಅಸ್ವಸ್ಥರಾಗಿದ್ದರು.
- 5-7-2005ರಂದು ಬಾಗಲಕೋಟೆ ಜಿಲ್ಲೆ, ಸೂಳಿಭಾವಿ, ಹುನಗುಂದ ತಾ॥ ಸೂಳಿಭಾವಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 12 ಮಕ್ಕಳು ಅಸ್ವಸ್ಥರಾಗಿದ್ದರು. ಪ್ರಥಮ ಚಿಕಿತ್ಸೆ ನೀಡಿದ ನಂತರ ಎಲ್ಲದರೂ ಆರೋಗ್ಯವಾಗಿದ್ದಾರೆ.
- ಎಂ.ಪಿ.ಎಸ್. ಹೊನವಾಡ ಗ್ರಾಮ ಬಿಜಾಪುರ ತಾಲ್ಲೂಕು, ವಿಜಾಪುರ ಜಿಲ್ಲೆಯಲ್ಲಿ 43 ಮಕ್ಕಳು ಅಸ್ವಸ್ಥರಾಗಿದ್ದರು.
- ಕನ್ನಡ ಹೆಣ್ಣುಮಕ್ಕಳ ಶಾಲೆ, ನರಗುಂದ, ಗದಗ್ ಜಿಲ್ಲೆಯಲ್ಲಿ 8 ಮಕ್ಕಳು ಅಸ್ವಸ್ಥರಾಗಿದ್ದರು.
- ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹುಳಕುಂದು, ಗುಲ್ಬರ್ಗಾ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆಯಲ್ಲಿ 250 ಮಕ್ಕಳು ಅಸ್ವಸ್ಥರಾಗಿದ್ದರು.
- 24-6-2005 ರಂದು ಧಾರವಾಡ ತಾ. ಹೆಬ್ಬಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 11 ಮಕ್ಕಳು ಅಸ್ವಸ್ಥರಾಗಿದ್ದರು.
- 20-7-2005ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಕ್ಕಿ ರಾಂಪುರ, ಕೊರಟಗೆರೆ ತಾ, ತುಮಕೂರು ಜಿಲ್ಲೆ ಇಲ್ಲಿ 28 ಮಕ್ಕಳು ಅಸ್ವಸ್ಥರಾಗಿದ್ದು ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಸುರಕ್ಷಿತವಾಗಿ ಮನೆಗೆ ಕಳುಹಿಸಲಾಗಿದೆ.

ಇ) ದಿನಾಂಕ:5–7–2005ರಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಈ ಯೋಜನೆಯಡಿ ಶಾಲಾ ಮಕ್ಕಳಿಗೆ ಒದಗಿಸುತ್ತಿರುವ ಮಧ್ಯಾಹ್ನದ ಬಿಸಿಯೂಟದ ಗುಣಮಟ್ಟದ ಬಗ್ಗೆ ಹಾಗೂ ಇದನ್ನು ಸೇವಿಸಿದ ನಂತರ ಶಾಲಾ ಮಕ್ಕಳು ಅಸ್ವಸ್ಥಗೊಳ್ಳುತ್ತಿರುವ/ತೊಂದರೆಗೊಳಗಾಗುತ್ತಿರುವ ಪ್ರಸಂಗಗಳನ್ನು ತಪ್ಪಿಸುವ ಸಲುವಾಗಿ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವ ಸಲುವಾಗಿ ಸುತ್ತೋಲೆಯನ್ನು ಹೊರಡಿಸಿರುತ್ತಾರೆ.

- ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಅಕ್ಷರ ದಾಸೋಹ ಅಡುಗೆ ಕೇಂದ್ರಗಳಿಗೆ ಪ್ರತಿ ಮಾಹೆಯಲ್ಲಿ ಭೇಟಿ ನೀಡಿ ಶುಚಿತ್ವದ ಬಗ್ಗೆ, ಗುಣಮಟ್ಟದ ಆಹಾರ ತಯಾರಿಕೆ ಬಗ್ಗೆ ಅಡುಗೆಯವರಿಗೆ ಸೂಕ್ತ ತಿಳುವಳಿಕೆ ನೀಡಲು ತಿಳಿಸಲಾಗಿದೆ.
- ಅಡುಗೆ ಸಿಬ್ಬಂದಿಯವರಿಗೆ ಸುರಕ್ಷರೆ, ಶುಚಿತ್ವ, ಮಿತವ್ಯಯ, ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ಸಿದ್ಧಪಡಿಸಲು ತರಬೇತಿ ನೀಡಲಾಗಿದೆ.
- ಅನಿಲ ಸಿಲಿಂಡರ್ ಬಳಸುವ ಬಗ್ಗೆ ತಿಳುವಳಿಕೆ, ಲೆಕ್ಕಪತ್ರಗಳ ನಿರ್ವಹಣೆ ಶುಚಿತ್ವ ಕಾಪಾಡುವ ಬಗ್ಗೆ ರಾಜ್ಯಮಟ್ಟದಲ್ಲಿ ತರಬೇತಿ ಸಾಹಿತ್ಯವನ್ನು ಸಿದ್ಧಪಡಿಸಿ, ಎಲ್ಲಾ ಅಡುಗೆಯವರಿಗೆ ತರಬೇತಿ ನೀಡಲು ವ್ಯಾಪಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
- ಅಸ್ವಸ್ಥಗೊಂಡ ಸ್ಥಳಗಳಲ್ಲಿ ಮಕ್ಕಳ ಆರೋಗ್ಯ ತಪಾಸಣೆಯನ್ನು ಸಂಬಂಧಿಸಿದ ಸ್ಥಳೀಯ ಆರೋಗ್ಯಾಧಿಕಾರಿಗಳು ಕೂಡಲೆ ಸ್ಪಂದಿಸುವ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಈ) ಈ ಯೋಜನೆಯನ್ನು ಇನ್ನೂ ಪರಿಣಾಮಕಾರಿಯಾಗಿ ಜಾರಿ ಮಾಡಲು ದಿನಾಂಕ 1–4–2005ರಿಂದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗಳಿಗೆ ಜವಾಬ್ದಾರಿ ನೀಡಲಾಗಿದೆ.

- ಅಡುಗೆಯವರಿಗೆ ವಿಶೇಷ ತರಬೇತಿ ನೀಡುವ ಬಗ್ಗೆ ಕಾರ್ಯಕ್ರಮ ಹಮ್ಮಿಕೊಂಡಿದೆ.
- ಇತರೆ ಇಲಾಖೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಗ್ರೂಪ್ 'ಎ' ಮತ್ತು 'ಬಿ' ಅಧಿಕಾರಿಗಳ ಸಹಯೋಗದೊಂದಿಗೆ ಉಸ್ತುವರಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ

ತರಗತಿ 1 ರಿಂದ 7 ರ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಫಲಾನುಭವಿಗಳ ವಿವರ.

ಕ್ರ. ಸಂ.	ಜಿಲ್ಲೆಯ ಹೆಸರು	ಸರ್ಕಾರಿ	ಅನುದಾನಿತ	ಒಟ್ಟು
1	2	3	4	5
1.	ಬೆಂಗಳೂರು ನಗರ	230392	141118	371510
2.	ಚಿತ್ರದುರ್ಗ	192214	18480	210694
3.	ದಾವಣಗೆರೆ	174342	25660	200002
4.	ಶಿವಮೊಗ್ಗ	166468	10263	176731
5.	ಬೆಂಗಳೂರು ಗ್ರಾ.	195147	11269	206416
6.	ಕೋಲಾರ	277831	19337	297168

1	2	3	4	5
7.	ತುಮಕೂರು	278495	8632	287127
8.	ಮೈಸೂರು	242999	38722	275721
9.	ಮಂಡ್ಯ	159610	10883	170493
10.	ಚಾಮರಾಜನಗರ	95592	10987	106579
11.	ಕೊಡಗು	48847	4155	53002
12.	ಹಾಸನ	172136	12331	184467
13.	ಚಿಕ್ಕಮಗಳೂರು	113167	6530	119697
14.	ದಕ್ಷಿಣ ಕನ್ನಡ	141375	72921	214296
15.	ಉಡುಪಿ	78698	44968	123666
16.	ಧಾರವಾಡ	191785	3103	194888
17.	ಉತ್ತರ ಕನ್ನಡ	162748	8556	171304
18.	ಹಾವೇರಿ	195663	6605	202268
19.	ಗದಗ್	123914	5974	129888
20.	ಬೆಳಗಾಂ	530130	18471	548601
21.	ಬಾಗಲಕೋಟೆ	206168	11430	217598
22.	ಬಿಜಾಪುರ	248409	12514	260923
23.	ಬೀದರ್	170289	1528	171817
24.	ಬಳ್ಳಾರಿ	254156	13058	267214
25.	ಗುಲ್ಬರ್ಗಾ	407154	65614	472768
26.	ಕೊಪ್ಪಳ	148063	3645	151708
27.	ರಾಯಚೂರು	210746	6688	217434
	ಒಟ್ಟು	**5416538**	**587442**	**6003980**

5790 (6498) ಶ್ರೀ ಶಂಕರಲಿಂಗೇಗೌಡ ಹೆಚ್. ಎಸ್. (ಚಾಮರಾಜ ನಗರ): ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಕುವೆಂಪು ನಗರದಲ್ಲಿರುವ ವಾಣಿಜ್ಯ ಸಂಕೀರ್ಣದ ಮೊದಲನೇ ಮಹಡಿಯನ್ನು ಯಾರಿಗೆ/ಯಾವ ಸಂಸ್ಥೆಗೆ ನೀಡಲಾಗಿದೆ, ವಿವರ ನೀಡುವುದು;

ಆ) ನೀಡದಿದ್ದಲ್ಲಿ, ಈ ಮಹಡಿಯ ಸ್ಥಳವನ್ನು ನೀಡುವಂತೆ ಯಾರ್ಯಾರು, ಯಾವ ಯಾವ ಸಂಸ್ಥೆ ಇಲಾಖೆಗೆ ಅರ್ಜಿ ಸಲ್ಲಿಸಿವೆ; ಅರ್ಜಿ ಯಾವಾಗ ಸಲ್ಲಿಸಲಾಗಿದೆ; ಈ ಅರ್ಜಿಗಳ ಬಗ್ಗೆ ಯಾವ ಯಾವ ಕ್ರಮ ವಹಿಸಲಾಗಿದೆ;

ಇ) ಈ ಕಟ್ಟಡದಲ್ಲಿ ಉಪನೋಂದಣ ಅಧಿಕಾರಿಗಳ ಕಛೇರಿ ತೆರೆಯಬೇಕೆಂಬ ಮನವಿಯ ಬಗ್ಗೆ ಯಾವ ಕ್ರಮ ವಹಿಸಲಾಗುತ್ತಿದೆ; ವಿವರ ನೀಡುವುದು?